197 (576) ಶ್ರೀ ಧ್ರುವನಾರಾಯಣ ಆರ್ (ಸಂತೇಮಾರಕ ಶ್ರೀ ಬಂಡೇಪ್ಪ ಕಾಶಂಪೂರ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ ಎಣ್ಣೆ ಕಾಳು ಮತ್ತು ದ್ವಿದಳ ಧಾನ್ಯಗಳ ಉತ್ಪಾದನೆಯ ಗುರಿಯನ್ನು ನಗಧಿ ಪಡಿಸಲು ಇರುವ ಅಧಾರಗಳೇನು?

ಆ ರಾಜ್ಯದಲ್ಲಿ ಮುಖ್ಯವಾಗಿ ಎಣ್ಣೆಕಾಳು ಬೆಳೆಗಳಾದ ನೆಲಗಡಲೆ ಮತ್ತು ಸೂರ್ಯಕಾಂತಿಯ ಬೇಡಿಕೆ ಎಷ್ಟು?

ಇ ಬೇಡಿಕೆಗಿಂ ಕಡಿಮೆ ಉತ್ಪಾದನಾ ಗುರಿ ಇದ್ದಲ್ಲಿ, ಬೇಡಿಕೆ ಮಟ್ಟಕ್ಕೆ ಉತ್ಪಾದನೆ ಹೆಚ್ಚಿಸಲು ಕೈಗೊಂಡ ಕ್ರಮಗಳೇನು?

ಈ ಎಣ್ಣೆಕಾಳು ಮತ್ತು ದ್ವಿದಳ ಧಾನ್ಯಗಳ ಉತ್ಪಾದಕತೆ ರಾಷ್ಟ್ರದ ಸರಾಸರಿ ಇಳುವರಿಗೆ ಸಮನಾಗಿದೆಯೇ?

ಉತ್ಪಾದಕತೆ ಇಳುವರಿಯನ್ನು ಹೆಚ್ಚಿಸಲು ಸಂಶೋಧನಾಲಯಗಳಿಂದ ಹೊಸತಳಿಗಳ ತಂತ್ರಜ್ಞಾನ ಪದ್ದತಿಗಳೆನ್ನು ಶಿಫಾರಸ್ಸು ಮಾಡಲಾಗಿದೆಯೆ? ಇದ್ದಲ್ಲಿ ಇದನ್ನು ಅನುಷ್ಠಾನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಂಡೆಪ್ಪಕಾಶೆಂಪೂರ್

ಅ ಬೇಡಿಕೆ ಹಾಗೂ ಜನ ಸಂಖ್ಯೆಗನುಗುಣವಾಗಿ ಇವುಗಳ ಬೆಳೆವಾರು ಉತ್ಪಾಧನಾ ಗುರಿಯನ್ನು ನಿಗಧಿಪಡಿಸಲಾಗುತ್ತಿದೆ

ಆ ರಾಜ್ಯದಲ್ಲಿ ನೆಲಗಡಲೆ ಸೂರ್ಯಕಾಂತಿಯ ವಾರ್ಷಿಕ ಬೇಡಿಕೆಯು ಸುಮಾರು 16 ಲಕ್ಷ ಟನ್ ಗಳೆಂದು ಅಂದಾಜಿಸಲಾಗಿದೆ

ಇ ರಾಜ್ಯದಲ್ಲಿ ಎಣ್ಣೆಕಾಳುಗಳ ಉತ್ಪಾದನೆಯು ಬೇಡಿಕೆಗೆ ಅನುಗುಣವಾಗುಣವಾಗಿರುತ್ತದೆ

ಈ ಇಲ್ಲಾ, ಉತ್ಪಾಧನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು ಸಂಶೋಧನೆಯ ಫಲಗಳನ್ನು ಅಳವಡಿಸಲಾಗುತ್ತಿದೆ ಇದಕ್ಕಾಗಿ, ಹೊಸ ತಳಿಗಳ ಪ್ರಯೋಗ ತಾಕುಗಳೊಂದಿಗೆ ಪೂರ್ಣಮಟ್ಟದ ಪ್ರಾತ್ಯಕ್ಷಿಕೆಗಳನ್ನು ಸಹ ಏರ್ಪಸಲಾಗುತ್ತಿದೆ

198 (397) ಶ್ರೀ ಹಾಲಪ್ಪ ಹೆಚ್ (ಹೊಸನಗರ)

ಮಾನ್ಯ ಆಹಾರ ನಾಗರಿಕ ಸರವರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಮಲೆನಾಡಿನ (ಶಿವಮೊಗ್ಗ ಜಿಲ್ಲೆ) ಹೊಸನಗರ, ಸಾಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ LPG ಸಂಪರ್ಕವಿರುವವರಿಗೆ ಪಡಿತರ ಸೀಮೆ ಎಣ್ಣೆಯನ್ನು ಏಕೆ ವಿತರಿಸಲಾಗುತ್ತಿಲ್ಲ,

ಆ) ಮಲೆನಾಡಿನ ಮೇಲ್ಕಂಡ ತಾಲ್ಲೂಕುಗಳಲ್ಲಿ ಪಡಿತರ ಸೀಮೆಎಣ್ಣೆ ಅಡಿಗೆ ಬಳಕೆಗಿಂತ ಬೆಳಕಿಗೆ ಬಳಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಮೇಲ್ಕಂಡ ತಾಲ್ಲೂಕುಗಳಲ್ಲಿ ಬೆಳಕಿಗಾಗಿ ಸೀಮೆಎಣ್ಣೆ ಕೊಡಲು ಇರುವ ತೊಂದರೆಗಳೇನು?

ಶ್ರೀ ಗೋವಿಂದ ಎಂ ಕಾರಜೋಳ

ಅ) ಅನಿಲ ಸಂಪರ್ಕ ಹೊಂದಿರುವವರು ಸಿಲಿಂಡರು ಉಪಯೋಗಿಸುವ ಮೂಲಕ ಸರ್ಕಾರದ ಸಹಾಯಧನ ಸೌಲಭ್ಯ ಪಡೆಯುತ್ತಿರುವುದರಿಂದ ಸೀಮೆಎಣ್ಣೆಗೂ ಸಹ ಸಹಾಯಧನಯುಕ್ತ ಪದಾರ್ಥ ಆಗಿರುವುದರಿಂದ ಒಬ್ಬನೇ ವ್ಯಕ್ತಿ ಎರಡು ಯೋಜನೆಗಳ ಸಹಾಯಧನ ಪಡೆಯುವುದು ಸಮಂಜಸವಲ್ಲ ಜೊತೆಗೆ ಭಾರತ ಸರ್ಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಮಂತ್ರಾಲಯದ ದಿನಾಂಕ 28 2 1997ರ ನಿರ್ದೇಶನದಂತೆ ಸಾರ್ವಜನಿಕ ವಿತರಣಾ ಪದ್ಧತಿಯ ಸೀಮೆಎಣ್ಣೆಯನ್ನು